ಆ) ಈಗಿರತಕ್ಕ ಕಡಲತೀರ ನಿಯಂತ್ರಣ ವಲಯದ ಅಧಿಸೂಚನೆ ಸಂಖ್ಯೆ : ಎಸ್.ಒ. 114(ಇ) ದಿನಾಂಕ: 19.02.1991 ಅನ್ನು ಪರಿಷ್ಕರಿಸಬೇಕೆಂಬ ಜನಪ್ರತಿನಿಧಿಗಳ ಈ ಕೆಳಕಂಡ ಮನವಿಗಳನ್ನು ರಾಜ್ಯ ಸರ್ಕಾರವು ಕೇಂದ್ರಕ್ಕೆ ಸಲ್ಲಿಸಿರುತ್ತದೆ;

ಅ) ಕಟ್ಟಡ ಪರವಾನಗಿ ಇಲ್ಲದೆ ಕಡಲ ತೀರದ ಭರತ ರೇಖೆಯಿಂದ 200 ಮೀ. ಹೊರಗಡೆ ವಾಸದ ಮನೆಗಳನ್ನು ಕಟ್ಟಲು;

ಆ) ಸಿಆರ್‌ಜೆಡ್ ಕಾನೂನಿನಿಂದ ಉಡುಪಿ ಜಿಲ್ಲೆಯ ಕರಾವಳಿಯನ್ನು ಮುಕ್ತಗೊಳಿಸಲು;

ಇ) ಕರಾವಳಿ ನಿಯಂತ್ರಣ ವಲಯವನ್ನು ಈಗಿನ 500 ಮೀಟರ್‌ನಿಂದ 200 ಮೀಟರ್‌ಗೆ ಇಳಿಸಲು;

ಈ) ಕರಾವಳಿ ತೀರ ಪ್ರದೇಶದಲ್ಲಿ ಸರ್ಕಾರಿ ಖಾಲಿ ಜಮೀನಿನಲ್ಲಿ ತಾತ್ಕಾಲಿಕ ಮನೆಕಟ್ಟಿ ತಲೆತಲಾಂತರಗಳಿಂದ ವಾಸಿಸುತ್ತಿರುವ ಬಡ ಮೀನುಗಾರರಿಗೆ ಜಮೀನಿನ ಹಕ್ಕು ಪತ್ರ ನೀಡಲು;

ಮೇಲಿನ ಜನಪ್ರತಿನಿಧಿಗಳ ಮನವಿಗಳನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ದಿನಾಂಕ: 25.5.2006 ರಂದು ಸಲ್ಲಿಸಿರುತ್ತದೆ ಹಾಗೂ ದಿನಾಂಕ: 01.07.2006 ಹಾಗೂ 25.08.2006ರಂದು ಎರಡು ಜ್ಞಾಪನಾ ಪತ್ರಗಳನ್ನು ಸಹ ಸಲ್ಲಿಸಿರುತ್ತದೆ. ಆದರೆ ಈ ಬಗ್ಗೆ ಕೇಂದ್ರ ಸರ್ಕಾರವು ಇದುವರೆಗೂ ನಿರ್ಧಾರ ಕೈಗೊಂಡಿರುವುದಿಲ್ಲ.

255 (446) – ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್.) – ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸನ್ಮಾನ್ಯ ಮುಖ್ಯಮಂತ್ರಿಗಳು ಕೆ.ಜಿ.ಎಫ್.ಗೆ ಭೇಟಿ ನೀಡಿದ್ದಾಗ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಶೀಘ್ರ ನಿರ್ಧಾರ ಪ್ರಕಟಿಸುವುದಾಗಿ ಘೋಷಿಸಿರುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಹಾಗಿದ್ದಲ್ಲಿ, ಸರ್ಕಾರ ಇದನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು ;

ಆ) ಸರ್ಕಾರ ಹೊಸದಾಗಿ ಮಂಜೂರು ಮಾಡಿರುವ ಕೈಗಾರಿಕೆಗಳು ಯಾವುವು ;

ಇ) ಕೆ.ಜಿ.ಎಫ್. ಕ್ಷೇತ್ರವು ವಿಶೇಷ ಆರ್ಥಿಕ ವಲಯವೆಂದು ಘೋಷಿಸಲು (ಕೈಗಾರಿಕಾ ವಲಯದ ಹೊಸ ಪಟ್ಟಿಯಲ್ಲಿ) ಸರ್ಕಾರ ತೀರ್ಮಾನಿಸಿದೆಯೇ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)–

ಅ) ಸರ್ಕಾರವು 2006–11 ನೂತನ ಕೈಗಾರಿಕಾ ನೀತಿಯನ್ನು ದಿನಾಂಕ 1.4.2006ರಿಂದ ಜಾರಿಗೆ ಬರುವಂತೆ ಘೋಷಿಸಿರುತ್ತದೆ. ರಾಜ್ಯದಲ್ಲಿರುವ 176 ತಾಲ್ಲೂಕುಗಳನ್ನು ವಲಯಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳು:

ಅತಿ ಹೆಚ್ಚು ಹಿಂದುಳಿದ ಮತ್ತು – ವಲಯ – 1
ಹೆಚ್ಚು ಹಿಂದುಳಿದ ತಾಲ್ಲೂಕುಗಳು
ಹಿಂದುಳಿದ ತಾಲ್ಲೂಕುಗಳು – ವಲಯ – 2
ಕೈಗಾರಿಕೆಗಳು ಅಭಿವೃದ್ಧಿಯಾದ ತಾಲ್ಲೂಕುಗಳು – ವಲಯ – 3

ಬಂಗಾರಪೇಟೆ ತಾಲ್ಲೂಕನ್ನು ಹಿಂದುಳಿದ ತಾಲ್ಲೂಕು ವಲಯ–2 ಎಂದು ಘೋಷಿಸಿದ್ದು, ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಬಂಡವಾಳ ಹೂಡಿಕೆ ಸಹಾಯಧನ, ಪ್ರವೇಶ ತೆರಿಗೆ ಮತ್ತು ವಿಶೇಷ ಪ್ರವೇಶ ತೆರಿಗೆ ವಿನಾಯಿತಿ, ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ಪರಿವರ್ತನಾ ಶುಲ್ಕದ ಮನ್ನಾ ಮತ್ತು ತ್ಯಾಜ್ಯ ವಸ್ತುಗಳ ಸಂಸ್ಕರಣಾ ವಸ್ತುಗಳ ಸ್ಥಾಪನೆಗೆ ಸಹಾಯಧನ ನೀಡುವ ರಿಯಾಯಿತಿ ಮತ್ತು ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಆ) ಬಂಗಾರಪೇಟೆ ತಾಲ್ಲೂಕು ಮೋಜಿಸಿದ್ದನಹಳ್ಳಿ ಗ್ರಾಮದಲ್ಲಿ ಸುಮಾರು 300 ಎಕರೆ ಪ್ರದೇಶದಲ್ಲಿ ರೂ. 706.00 ಕೋಟಿಗಳ ಬಂಡವಾಳ ಹೂಡಿ ಫ್ರೀ ಟ್ರೇಡ್ ವೇರ್ ಹೌಸಿಂಗ್ ಜೋನ್ ವಿಶೇಷ ಆರ್ಥಿಕ ವಲಯ ಸ್ಥಾಪಿಸಲು ಮೆ: ಶಿಷ್ಕೋ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ., ಘಟಕಕ್ಕೆ ದಿನಾಂಕ 28.8.2006 ರಂದು ನಡೆದ ರಾಜ್ಯ ಉನ್ನತ ಮಟ್ಟದ ಅನುಮೋದನೆ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಈ ಯೋಜನೆಯಿಂದ ಸುಮಾರು 8250 ಜನರಿಗೆ ಉದ್ಯೋಗ ಅವಕಾಶ ಸಿಗುವ ನಿರೀಕ್ಷೆಯಿದೆ. ಭಾರತ ಸರ್ಕಾರವು ಸದರಿ ಯೋಜನೆಗೆ ದಿನಾಂಕ: 10.10.2006ರಂದು ತಾತ್ವಿಕ ಅನುಮೋದನೆ ನೀಡಿರುತ್ತದೆ.

ಇ) ಇಲ್ಲ.

256 (482) – ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್.) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದಿನ ಸರ್ಕಾರದಲ್ಲಿ ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಕೆ.ಜಿ.ಎಫ್.ನ ಬಿ.ಜಿ.ಎಂ.ಎಲ್. ನೌಕರರಿಗೆ ಪುನರ್ವಸತಿ ಕಲ್ಪಿಸಲು 200 ಕೋಟಿ ರೂಪಾಯಿಗಳ ಕೈಗಾರಿಕೆಗಳನ್ನು ಸ್ಥಾಪಿಸಲು ಘೋಷಣೆ ಮಾಡಿದ್ದರೂ ಇದುವರೆವಿಗೆ ಕಾರ್ಯಗತ ಮಾಡದಿರಲು ಕಾರಣಗಳೇನು ;

ಆ) ಸರ್ಕಾರವು ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳುತ್ತದೆ ;

ಇ) ಕೈಗಾರಿಕೆಗಳ ಸ್ಥಾಪನೆಗೆ ಸಂಬಂಧಪಟ್ಟಂತೆ ಹೊಸ ಯೋಜನೆಗಳು ಏನಾದರೂ ಸರ್ಕಾರದ ಮುಂದಿದೆಯೇ ;

ಈ) ಕೇಂದ್ರ ಸರ್ಕಾರ ಏನಾದರೂ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರದ ಜೊತೆ ಒಡಂಬಡಿಕೆಯನ್ನೇನಾದರೂ ಮಾಡಿಕೊಂಡಿದೆಯೇ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)–

ಅ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆದರೆ ಬಿಜಿಎಂಎಲ್ ಅನ್ನು ಪುನಶ್ಚೇತನಗೊಳಿಸಲು ಕೇಂದ್ರ ಸರ್ಕಾರವು ಗ್ಲೋಬಲ್ ಟೆಂಡರ್ ಅನ್ನು ಕರೆಯುತ್ತಿದೆ.

ಆ) ಕೆ.ಜಿ.ಎಫ್. ನ ಬಿಜಿಎಂಎಲ್ ಫ್ಯಾಕ್ಟರಿಯನ್ನು ಪುನಶ್ಚೇತನ ಗೊಳಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಆಗ್ರಹ ಪಡಿಸಿದೆ.

ಇ) ಇಲ್ಲ.

ಈ) ಇಲ್ಲ.

257 (483) – Sri Rajendran S (K.G.F.) will the for Hon'ble Revenue Minister be pleased to state?